ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಶುಕ್ರವಾರ, ೦೨, ಜನವರಿ, ೨೦೨೬ (ಪುಷ್ಯ, ೧೨, ಶಕವರ್ಷ, ೧೯೪೭)	ಸಂಚಿಕೆ ೦೨
Volume - 161	BENGALURU, FRIDAY, 02, JANUARY, 2026 (PUSHYA , 12, SHAKAVARSHA, 1947)	Issue 02

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಸಂಖ್ಯೆ: ಟಿಡಿ 358 ಟಿಸಿಒ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:24.10.2025

ಅಧಿಸೂಚನೆ

ಕರ್ನಾಟಕ ಮೋಟಾರು ವಾಹನ (ತಿದ್ದುಪಡಿ) ನಿಯಮಗಳು, 2025ರ ಕರಡನ್ನು, ಮೋಟಾರು ವಾಹನ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59) ರ ಪ್ರಕರಣ 212ರ ಉಪ ಪ್ರಕರಣ (1)ರ ಮೂಲಕ ಅಗತ್ಯಪಡಿಸಲಾದಂತೆ ಅಧಿಸೂಚನೆ ಸಂಖ್ಯೆ:ಟಿಡಿ 358 ಟಿಸಿಒ 2023, ದಿನಾಂಕ:09.09.2025ರಲ್ಲಿ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-4ಎ (ಸಂ.558)ನಲ್ಲಿ ದಿನಾಂಕ:09.09.2025 ರಂದು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಲಾಗಿರುವುದರಿಂದ,

ಮತ್ತು, ಸದರಿ ರಾಜ್ಯಪತ್ರವನ್ನು ದಿನಾಂಕ:09.09.2025ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದ್ದುದರಿಂದ:

ಮತ್ತು, ಇದರ ಪರವಾಗಿ ಈ ಬಗ್ಗೆ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಲಾಗಿರುವುದರಿಂದ,

ಆದುದರಿಂದ, ಮೋಟಾರು ವಾಹನ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59)ರ ಪ್ರಕರಣ 67 ಮತ್ತು 2012ರೊಂದಿಗೆ ಓದಲಾದ, ಪ್ರಕರಣ 95 ಮತ್ತು 96ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಮೋಟಾರು ವಾಹನ ನಿಯಮಗಳು, 1989ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು, ಕರ್ನಾಟಕ ಮೋಟಾರು ವಾಹನ (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅವುಗಳು ಜಾರಿಗೆ ಬರತಕ್ಕದ್ದು.

2. **ಹೊಸ ಅಧ್ಯಾಯ Vಎನ ಸೇರ್ಪಡೆ:-** ಕರ್ನಾಟಕ ಮೋಟಾರು ವಾಹನ ನಿಯಮಗಳು, 1989ರಲ್ಲಿ, ಅಧ್ಯಾಯ V ಮತ್ತು ಅದಕ್ಕೆ ಅದರ ಮೇರೆಗೆ ಸಂಬಂಧಪಟ್ಟ ನಮೂದುಗಳ ನಂತರ, ಈ ಮುಂದಿನವುಗಳನ್ನು ಸೇರಿಸತಕ್ಕದ್ದು, ಎಂದರೆ:-

ಅಧ್ಯಾಯ Vಎ

135ಎ. ಸಮಿತಿಯ ರಚನೆ:-(1) ರಾಜ್ಯ ಸರ್ಕಾರವು, ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು, ಈ ಸಮಿತಿಯು ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಅಧ್ಯಕ್ಷರು ನಿವೃತ್ತರು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಿರತಕ್ಕದ್ದು.

(3) ಇಬ್ಬರು ಸದಸ್ಯರಲ್ಲಿ ಒಬ್ಬರು, ನಿವೃತ್ತ ಪ್ರಧಾನ ಕಾರ್ಯದರ್ಶಿ ಅಥವಾ ಕಾನೂನು ಶಿಕ್ಷಣ ಪಡೆದ ಸರ್ಕಾರಿ ಕಾರ್ಯದರ್ಶಿಯಾಗಿರತಕ್ಕದ್ದು, ಮತ್ತೊಬ್ಬ ಸದಸ್ಯರು ಖಾಸಗಿ ಪ್ರಯಾಣಿಕ ಸಾರಿಗೆ ವ್ಯವಸ್ಥೆಯಲ್ಲಿ ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಹಿತಾಸಕ್ತಿ ಹೊಂದಿರದ ಕೈಗಾರಿಕಾ ತಜ್ಞರು ಅಥವಾ ಆರ್ಥಿಕ ತಜ್ಞರಾಗಿರಬೇಕು.

(4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆ.ಎಸ್.ಆರ್.ಟಿ.ಸಿ) ಇವರು ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

135ಬಿ. ಸಮಿತಿಯ ಕಾರ್ಯಗಳು:- ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(i) ಸಮಿತಿಯು, ರಸ್ತೆ ಸಾರಿಗೆ ನಿಗಮಗಳ ಹಣಕಾಸಿನ ಪರಿಸ್ಥಿತಿಗಳನ್ನು ಅಧ್ಯಯನ ಮಾಡತಕ್ಕದ್ದು ಮತ್ತು ಕಾಲಕಾಲಕ್ಕೆ ವಿವಿಧ ದರಗಳ ಪರಿಷ್ಕರಣೆಯನ್ನು ಸಂಬಂಧಪಟ್ಟ ರಸ್ತೆ ಸಾರಿಗೆ ನಿಗಮಕ್ಕೆ ಸೂಚಿಸತಕ್ಕದ್ದು; ಮತ್ತು

(ii) ಸಮಿತಿಯು ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸಲು ಪ್ರಯಾಣ ದರಗಳ ಮೇಲೆ ವಿವಿಧ ಅಧಿಕರಗಳು, ಶುಲ್ಕಗಳನ್ನು ವಿಧಿಸಲು ಸೂಚಿಸಬಹುದು.

135ಸಿ. ಸಮಿತಿಯ ಅಧಿಕಾರಾವಧಿ- (1) ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯ ಸರ್ಕಾರದ ಇಚ್ಛೆಗೆ ಅನುಗುಣವಾಗಿ, ತಮ್ಮ ನಾಮನಿರ್ದೇಶನವಾದ ದಿನಾಂಕದಿಂದ ಮೂರು ವರ್ಷಗಳನ್ನು ಮೀರದ ಅವಧಿಯವರೆಗೆ ಅಥವಾ ಪ್ರಾಧಿಕಾರದ ಪುನಾರಚನೆಯಾಗುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರದಲ್ಲಿರತಕ್ಕದ್ದು.

(2) ಯಾರೇ ಸದಸ್ಯ ಮರು-ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ.

135ಡಿ, ರಾಜೀನಾಮೆ:- (1) ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿ ಲಿಖಿತದಲ್ಲಿ ಪತ್ರದ ಮೂಲಕ ತಮ್ಮ ಹುದ್ದೆಗೆ ರಾಜೀನಾಮೆ ನೀಡತಕ್ಕದ್ದು.

(2) ಅಂಥ ಸದಸ್ಯರ ಸ್ಥಾನವು ಅವರ ರಾಜೀನಾಮೆಯನ್ನು ಅಂಗೀಕರಿಸಿದ ದಿನಾಂಕದಿಂದ ಅಥವಾ ರಾಜೀನಾಮೆಯ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿ ಮುಗಿದ ತರುವಾಯ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದಂದು ಖಾಲಿಯಿರತಕ್ಕದ್ದು.

(3) ರಾಜೀನಾಮೆಯನ್ನು ಸ್ವೀಕರಿಸುವ ಅಧಿಕಾರವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

135ಇ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ:- ಸಮಿತಿಯ ಸದಸ್ಯತ್ವದಲ್ಲಿ ಖಾಲಿ ಸ್ಥಾನ ಉಂಟಾದಾಗ ಅಥವಾ ಉಂಟಾಗುವ ಸಂಭವವಿದ್ದಾಗ, ಸದಸ್ಯ ಕಾರ್ಯದರ್ಶಿಯು, ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅಂಥ ವರದಿಯನ್ನು ಸ್ವೀಕರಿಸಿದ ನಂತರ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ

ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು ಯಾರ ಸ್ಥಾನದಲ್ಲಿ ನಾಮನಿರ್ದೇಶನಗೊಂಡಿದಾನೋ ಆ ಸದಸ್ಯರ ಉಳಿದ ಪದಾವಧಿಯವರೆಗೆ ಪದವಿಯನ್ನು ಹೊಂದಿರತಕ್ಕದ್ದು.

135ಎಫ್ ಸದಸ್ಯರ ವೇತನ ಮತ್ತು ಭತ್ಯೆ:- (1) ಅಧ್ಯಕ್ಷರು ಮತ್ತು ಸದಸ್ಯರು ಪಡೆಯುವ ಯಾವುದೇ ಪಿಂಚಣಿಯನ್ನೂ ಒಳಗೊಂಡಂತೆ, ಹಿಂದಿನ ಪದಾವಧಿಯಲ್ಲಿ ಅವರ ಕಡೆಯದಾಗಿ ಪಡೆದ ವೇತನಕ್ಕೆ ಸಮನಾದ ಗೌರವಧನವನ್ನು ಸಂದಾಯಮಾಡತಕ್ಕದ್ದು.

(2) ಅಧ್ಯಕ್ಷರು ಮತ್ತು ಸದಸ್ಯರ ಪ್ರಯಾಣ ಭತ್ಯೆಯನ್ನು, ಅವರು ಅಧಿಕೃತ ಕರ್ತವ್ಯಗಳ ಮೇಲೆ ಅವರು ಕೈಗೊಳ್ಳುವ ಪ್ರಯಾಣಕ್ಕೆ ಅನ್ವಯವಾಗಬಹುದಾದ ನಿಯಮಗಳ ಮೂಲಕ ನಿಯಂತ್ರಿಸತಕ್ಕದ್ದು ಮತ್ತು ಅವರ ವೇತನವನ್ನು ಸಂದಾಯ ಮಾಡುವ ಪ್ರಾಧಿಕಾರವು ಅದನ್ನು ಸಂದಾಯಮಾಡತಕ್ಕದ್ದು.

135ಜಿ ಕಾರ್ಯಕಲಾಪ ವಿಲೇವಾರಿ:-(1) ಎಲ್ಲಾ ರಸ್ತೆ ಸಾರಿಗೆ ಸಂಸ್ಥೆಗಳು ಪ್ರಯಾಣದರ ಪರಿಷ್ಕರಣೆ ಅಥವಾ ಮೇಲುತೆರಿಗೆ ಶುಲ್ಕವನ್ನು ವಿಧಿಸುವ ಪ್ರಸ್ತಾವವನ್ನು ಸಮಿತಿಯ ಪರಿಶೀಲನೆಗಾಗಿ ಸಲ್ಲಿಸಬಹುದು.

(2) ಸಮಿತಿಯು, ಪ್ರಸ್ತಾವವನ್ನು ಪರಿಗಣಿಸತಕ್ಕದ್ದು ಮತ್ತು ಅದನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಷ್ಕೃತ ದರಗಳು ಅಥವಾ ಮೇಲುತೆರಿಗೆ ಅಥವಾ ಶುಲ್ಕಗಳನ್ನು ಸೂಚಿಸತಕ್ಕದ್ದು.

(3) ರಸ್ತೆ ಸಾರಿಗೆ ನಿಗಮದ ಆಯಾಯ ಸಂಸ್ಥೆಗಳು ಶಿಫಾರಸುಗಳನ್ನು ಅಳವಡಿಸಿಕೊಳ್ಳತಕ್ಕದ್ದು.

135ಎಚ್ ಸಭೆ:- (1) ಸಮಿತಿಯ ಅಧ್ಯಕ್ಷರ ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ಸಮಯದಲ್ಲಿ ಸಭೆ ಸೇರತಕ್ಕದ್ದು, ಸದರಿ ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(2) ಅಧ್ಯಕ್ಷರು, ತಾವು ಹಾಜರಿದ್ದ ಸಮಿತಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಅವರ ಅನುಪಸ್ಥಿತಿಯಲ್ಲಿ, ತಮ್ಮ ಸ್ಥಾನದಲ್ಲಿ ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಸಮಿತಿಯ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು ಮತ್ತು ಅಧ್ಯಕ್ಷರು ಅಂಥ ನಾಮನಿರ್ದೇಶನವನ್ನು ಮಾಡದಿರುವಲ್ಲಿ, ಅಂಥ ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸಲು ತಮ್ಮಲ್ಲಿಯೇ ಒಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು.

135ಐ ಸಭೆಗಳ ನೋಟಿಸ್:- (1) ಸಾಮಾನ್ಯವಾಗಿ ಸಮಿತಿಯ ಸದಸ್ಯರಿಗೆ ಎರಡು ವಾರಗಳಲ್ಲಿ ಉದ್ದೇಶಿತ ಸಭೆಯ ನೋಟಿಸನ್ನು ನೀಡತಕ್ಕದ್ದು.

(2) ಸಮಿತಿಯ ಸಭೆಯ ಕಾರ್ಯಕಲಾಪ ಪಟ್ಟಿಯಲ್ಲಿ ಸೇರಿಸಿರುವುದನ್ನು ಹೊರತುಪಡಿಸಿ ಅಧ್ಯಕ್ಷರ ಅನುಮತಿಯಿಲ್ಲದೆ ಯಾವುದೇ ಕಾರ್ಯಕಲಾಪವನ್ನು ಸಭೆಯಲ್ಲಿ ಪರಿಗಣಿಸತಕ್ಕದ್ದಲ್ಲ.

(3) ಸದಸ್ಯ ಕಾರ್ಯದರ್ಶಿಯು, ತುರ್ತು ಕಾರಣ ಮತ್ತು ಚರ್ಚೆಯ ವಿಷಯ-ವಸ್ತುವಿನ ಬಗ್ಗೆ ಸದಸ್ಯರಿಗೆ ಮುಂಚಿತವಾಗಿ ತಿಳಿಸಿದ ತರುವಾಯ, ಯಾವುದೇ ತುರ್ತು ಸಂದರ್ಭದಲ್ಲಿ ಸಮಿತಿ ವಿಶೇಷ ಸಭೆಯನ್ನು ಕರೆಯುವಂತೆ ಕೋರಬಹುದು, ಸದಸ್ಯ ಕಾರ್ಯದರ್ಶಿಯವರ ಕೋರಿಕೆಯ ಮೇರೆಗೆ ಅಧ್ಯಕ್ಷರು ಸಭೆಯನ್ನು ಕರೆಯತಕ್ಕದ್ದು.

135ಜೆ ಕೋರಂ:- (1) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಸಮಿತಿಯು ಇಬ್ಬರು ಸದಸ್ಯರಿಗಿಂತ ಕಡಿಮೆ ಸದಸ್ಯರಿರುವ ಯಾವುದೇ ಸಭೆಯನ್ನು ನಡೆಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಯಾರೇ ಸದಸ್ಯನು.

(ಎ) ಒಂದು ವೇಳೆ ಸದಸ್ಯನು, ಅಧ್ಯಕ್ಷರ ಲಿಖಿತ ಮಾಹಿತಿ ಮತ್ತು ಒಪ್ಪಿಗೆಯಿಲ್ಲದೆ ಸಮಿತಿಯ ಸತತ ಮೂರು ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಬಿ) ಸದಸ್ಯನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಸಮಿತಿಯಲ್ಲಿ ತಾನು ಪ್ರತಿನಿಧಿಸಲು ಉದ್ದೇಶಿಸಿರುವ ಹಿತಾಸಕ್ತಿಯನ್ನು ಪ್ರತಿನಿಧಿಸುವುದನ್ನು ನಿಲ್ಲಿಸಿದರೆ

- ಆ ಸದಸ್ಯನು ಸಭೆಯಲ್ಲಿ ಭಾಗವಹಿಸುವುದನ್ನು ನಿಷೇಧಿಸಬಹುದು

135ಕೆ ವಾರ್ಷಿಕ ವರದಿಗಳು:- ಈ ಸಮಿತಿಯು, ರಸ್ತೆ ಸಾರಿಗೆ ಸಂಸ್ಥೆಗಳಿಗೆ ನೀಡಲಾದ ಶಿಫಾರಸುಗಳ ಪ್ರತಿಯನ್ನು, ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ ಸಾಧ್ಯವಾಗಬಹುದಾದಷ್ಟು ಬೇಗನೇ ವಾರ್ಷಿಕ ವರದಿಯನ್ನು ಪ್ರತಿ ವರ್ಷ ಏಪ್ರಿಲ್ 1ರ ನಂತರ ಮತ್ತು ಡಿಸೆಂಬರ್ 31ರೊಳಗೆ ಮಂಡಿಸಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪುಷ್ಪ ವಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

PR-01

ಕರ್ನಾಟಕ ಸರ್ಕಾರ

ಸಂಖ್ಯೆ: ಟಿಓಆರ್ 23 ಟಿಡಿಎ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:29.11.2025

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಓಆರ್ 23 ಟಿಡಿಎ 2025, ದಿನಾಂಕ:15.05.2025 ರಲ್ಲಿ ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಗದಗ ಜಿಲ್ಲೆ, ಗದಗ ತಾಲ್ಲೂಕು, ಲಕ್ಕುಂಡಿ ಗ್ರಾಮದಲ್ಲಿರುವ ಅರಕ್ಷಿತ ಸ್ಮಾರಕಗಳನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 4(3) ರಡಿ" ರಾಜ್ಯ ಸಂರಕ್ಷಿತ ಸ್ಮಾರಕ/ದೇವಾಲಯವನ್ನಾಗಿ ಘೋಷಿಸಲು ಅಭಿಪ್ರಾಯಪಟ್ಟು, ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸುವುದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ದಿನಾಂಕ:12.06.2025 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

ಈ ಪ್ರದೇಶವನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು/ಸಲಹೆಗಳು ಸಾರ್ವಜನಿಕರಿಂದ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961 ರ ಕಲಂ 4(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿವಿಡಿಯಲ್ಲಿ ವಿವರಿಸಿರುವ ಗದಗ ಜಿಲ್ಲೆ, ಗದಗ ತಾಲ್ಲೂಕು, ಲಕ್ಕುಂಡಿ ಗ್ರಾಮದಲ್ಲಿರುವ ಅರಕ್ಷಿತ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಪುಷ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ .

ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಓಆರ್ 23 ಟಿಡಿಎ 2025, ದಿನಾಂಕ:29.11.2025 ಕ್ಕೆ ಪರಿವಿಡಿ

ಕ್ರ. ಸಂ	ಜಿಲ್ಲೆ	ತಾಲ್ಲೂಕು	ಇರುವ ಸ್ಥಳ	ಸ್ಮಾರಕ/ ಕಟ್ಟಡದ ಹೆಸರು	ಸಂರಕ್ಷಣೆಗೆ ಒಳಪಡುವ ರೆವಿನ್ಯೂ ನಿವೇಶನ ಮತ್ತು ವಿಸ್ತೀರ್ಣ	ಮೇರೆಗಳು (ಚಕ್ಕುಬಂದಿ)		ಒಡೆತನ	ಷರಾ
1	2	3	4	5	6	7		8	9
1.	ಗದಗ	ಗದಗ	ಲಕ್ಕುಂಡಿ	ಶ್ರೀ ಈಶ್ವರ ದೇವಸ್ಥಾನ	ಸ್ವತಿನ ಸಂಖ್ಯೆ: 2010/01 ಪೂರ್ವ-ಪಶ್ಚಿಮ 5.70 ಮೀಟರ್, ಉತ್ತರ-ದಕ್ಷಿಣ 4.60 ಮೀಟರ್ ಒಟ್ಟು ವಿಸ್ತೀರ್ಣ 10.30 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ಈಶ್ವರ ದೇವಸ್ಥಾನ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ರಮಜಾನಸಾಬ ನಧಾಪ		
						ಉತ್ತರಕ್ಕೆ	ಈರಪ್ಪ ವೀರಪ್ಪ ಸಜ್ಜನರ		
						ದಕ್ಷಿಣಕ್ಕೆ	ರಮಜಾನಸಾಬ ನಧಾಪ		
2.	ಗದಗ	ಗದಗ	ಲಕ್ಕುಂಡಿ	ಶ್ರೀ ಕಲ್ಮೇಶ್ವರ ದೇವಸ್ಥಾನ	ಸ್ವತ್ತಿನ ಸಂಖ್ಯೆ:2010/02 ಪೂರ್ವ-ಪಶ್ಚಿಮ (12.60+05.70+04.60) ಮೀಟರ್, ಉತ್ತರ-ದಕ್ಷಿಣ (06.00+05.00+04.85) ಮೀಟರ್ ಒಟ್ಟು ವಿಸ್ತೀರ್ಣ 233.075 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ಕಲ್ಮೇಶ್ವರ ದೇವಸ್ಥಾನ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಸರ್ಕಾರಿ ರಸ್ತೆ		
						ಉತ್ತರಕ್ಕೆ	ಇಮಾಮಸಾಬ ದೊಡ್ಡಮನಿ ಹಾಗೂ ರಮಜಾನ ಸಾಬ ನಧಾಪ		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
3.	ಗದಗ	ಗದಗ	ಲಕ್ಕುಂಡಿ	ಶ್ರೀ ಕನ್ನರ ಭಾವಿ ಮಾರುತಿ ದೇವಸ್ಥಾನ	ಸ್ವತಿನ ಸಂಖ್ಯೆ: 2010/03 ಪೂರ್ವ-ಪಶ್ಚಿಮ (12.50+06.00) ಮೀಟರ್, ಉತ್ತರ-ದಕ್ಷಿಣ 16.80 ಮೀಟರ್ ಒಟ್ಟು ವಿಸ್ತೀರ್ಣ 327.82 ಚದರ ಮೀಟರ್	ಪೂರ್ವಕ್ಕೆ	ಕೋಟೆ ಗೋಡಿ	ಶ್ರೀ ಕನ್ನರ ಭಾವಿ ಮಾರುತಿ ದೇವಸ್ಥಾನ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಕೋಟೆ ಗೋಡಿ		
						ಉತ್ತರಕ್ಕೆ	ಕನ್ನರ ಭಾವಿ ಹಾಗೂ ಮಾರುತಿ ದೇವಸ್ಥಾನದ ಜಾಗ		
						ದಕ್ಷಿಣಕ್ಕೆ	ಕೋಟೆ ಗೋಡಿ		
4.	ಗದಗ	ಗದಗ	ಲಕ್ಕುಂಡಿ	ಶ್ರೀ ಸಿದ್ದರ ಬಾವಿ	ಸ್ವತ್ತಿನ ಸಂಖ್ಯೆ: 2007/1 ಪೂರ್ವ-ಪಶ್ಚಿಮ (26.00+12.20)/2 ಮೀಟರ್, ಉತ್ತರ ದಕ್ಷಿಣ (28.00+13.00)2 ಮೀಟರ್ ಒಟ್ಟು ವಿಸ್ತೀರ್ಣ 546.00 ಚದರ ಮೀಟರ್	ಪೂರ್ವಕ್ಕೆ	ಚಂದ್ರಮೌಳೇಶ್ವರ ದೇವಸ್ಥಾನ	ಶ್ರೀ ಸಿದ್ದರ ಬಾವಿ ಹೆಸರಿನಲ್ಲಿರುತ್ತದೆ.	ಪುರಾತನ ಬಾವಿಯಾಗಿರುತ್ತದೆ.
						ಪಶ್ಚಿಮಕ್ಕೆ	ಕೋಟೆ ವೀರಭದ್ರೇಶ್ವರ ದೇವಸ್ಥಾನ ಬಯಲು ಜಾಗ		
						ಉತ್ತರಕ್ಕೆ	ಗ್ರಾಮ ಪಂಚಾಯತ್ ಮಳಿಗೆ		
						ದಕ್ಷಿಣಕ್ಕೆ	ಕೋಟೆ ವೀರಭದ್ರೇಶ್ವರ ದೇವಸ್ಥಾನ ಬಯಲು ಜಾಗ		

5.	ಗದಗ	ಗದಗ	ಲಕ್ಕುಂಡಿ	ಶ್ರೀ ಹನುಮನ ಬಾವಿ	ಸ್ವತ್ತಿನ ಸಂಖ್ಯೆ:2007/2 ಒಟ್ಟು ಪೂರ್ವ-ಪಶ್ಚಿಮ 9.00 ಮೀಟರ್, ಉತ್ತರ ದಕ್ಷಿಣ 8.60 ಮೀಟರ್ ಒಟ್ಟು ವಿಸ್ತೀರ್ಣ 77.40 ಚದರ ಮೀಟರ್	ಪೂರ್ವಕ್ಕೆ	ಮುಳ್ಳಕೊಂಪಿಮಠ ಇವರ ಆಸ್ತಿ	ಶ್ರೀ ಹನುಮನ ಬಾವಿ ಹೆಸರಿನಲ್ಲಿರುತ್ತದೆ.	ಪುರಾತನ ಬಾವಿಯಾಗಿರುತ್ತದೆ.
						ಪಶ್ಚಿಮಕ್ಕೆ	ಓಣಿ ರಸ್ತೆ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ಮಾಹಾಂತೇಶ ಭಜನಾ ಮಂಡಲಿ ಲಕ್ಕುಂಡಿ		
6.	ಗದಗ	ಗದಗ	ಲಕ್ಕುಂಡಿ	ಶ್ರೀ ರಾಮಲಿಂಗೇಶ್ವರ ದೇವಸ್ಥಾನ	ಸ್ವತ್ತಿನ ಸಂಖ್ಯೆ:2007/3 ಪೂರ್ವ-ಪಶ್ಚಿಮ 19.00 ಮೀಟರ್, ಉತ್ತರ-ದಕ್ಷಿಣ 6.00 ಮೀಟರ್ ಒಟ್ಟು ವಿಸ್ತೀರ್ಣ 114.00 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ
						ಪಶ್ಚಿಮಕ್ಕೆ	ಅಂಬಕ್ಕಿಯವರ ಜಾಗ		
						ಉತ್ತರಕ್ಕೆ	ಪಾಟೀಲ ಇವರ ಜಾಗ		
						ದಕ್ಷಿಣಕ್ಕೆ	ಬೆಂತೂರ ಇವರ ಜಾಗ		
7.	ಗದಗ	ಗದಗ	ಲಕ್ಕುಂಡಿ	ಶ್ರೀ ಫಕ್ಕೀರಸ್ವಾಮಿ ಮಠದ ಬಾವಿ	ಸ್ವತ್ತಿನ ಸಂಖ್ಯೆ:2007/4 ಪೂರ್ವ-ಪಶ್ಚಿಮ 27.00 ಮೀಟರ್, ಉತ್ತರ-ದಕ್ಷಿಣ 6.00 ಮೀಟರ್ ಒಟ್ಟು ವಿಸ್ತೀರ್ಣ 162.00 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ಫಕ್ಕೀರಸ್ವಾಮಿ ಮಠದ ಬಾವಿ ಹೆಸರಿನಲ್ಲಿರುತ್ತದೆ.	ಪುರಾತನ ಬಾವಿಯಾಗಿರುತ್ತದೆ.
						ಪಶ್ಚಿಮಕ್ಕೆ	ಕಮತರ ಇವರ ಜಮೀನು		
						ಉತ್ತರಕ್ಕೆ	ಶ್ರೀ ಫಕ್ಕೀರಸ್ವಾಮಿ ಮಠದ ಜಾಗ		
						ದಕ್ಷಿಣಕ್ಕೆ	ಕಮತರ ಇವರ ಜಮೀನು		
8.	ಗದಗ	ಗದಗ	ಲಕ್ಕುಂಡಿ	ಶ್ರೀ ಮಲ್ಲಿಕಾರ್ಜುನ ಮಠದ ಹತ್ತಿರ ಕಪ್ಪಚರ ದೇವಸ್ಥಾನ ಮತ್ತು ಬಾವಿ	ಸ್ವತ್ತಿನ ಸಂಖ್ಯೆ:2007/7 ಪೂರ್ವ-ಪಶ್ಚಿಮ 4.20 ಮೀಟರ್, ಉತ್ತರ-ದಕ್ಷಿಣ 4.20 ಮೀಟರ್ ಒಟ್ಟು ವಿಸ್ತೀರ್ಣ 17.64 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ಮಲ್ಲಿಕಾರ್ಜುನ ಮಠದ ಬಾವಿ ಹೆಸರಿನಲ್ಲಿರುತ್ತದೆ	ಪುರಾತನ ದೇವಸ್ಥಾನಮತ್ತು ಬಾವಿಯಾಗಿರುತ್ತದೆ.
						ಪಶ್ಚಿಮಕ್ಕೆ	ಮಠದ ಜಾಗ		
						ಉತ್ತರಕ್ಕೆ	ಮಠದ ಜಾಗ		
						ದಕ್ಷಿಣಕ್ಕೆ	ಮಠದ ಜಾಗ		

(ಎನ್. ಪುಷ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ಟಿಓಆರ್ 23 ಟಿಡಿಎ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಡಾ|| ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:29.11.2025

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಓಆರ್ 23 ಟಿಡಿಎ 2025, ದಿನಾಂಕ:15.05.2025 ರಲ್ಲಿ ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಗದಗ ಜಿಲ್ಲೆ, ಲಕ್ಕುಂಡಿ ತಾಲ್ಲೂಕಿನಲ್ಲಿರುವ ಅರಕ್ಷಿತ ಸ್ಮಾರಕಗಳನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 4(3) ರಡಿ" ರಾಜ್ಯ ಸಂರಕ್ಷಿತ ಸ್ಮಾರಕ/ದೇವಾಲಯವನ್ನಾಗಿ ಘೋಷಿಸಲು ಅಭಿಪ್ರಾಯಪಟ್ಟು, ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸುವುದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ದಿನಾಂಕ:12.06.2025 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

ಈ ಪ್ರದೇಶವನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು/ಸಲಹೆಗಳು ಸಾರ್ವಜನಿಕರಿಂದ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961 ರ ಕಲಂ 4(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿವಿಡಿಯಲ್ಲಿ ವಿವರಿಸಿರುವ ಗದಗ ಜಿಲ್ಲೆ, ಲಕ್ಕುಂಡಿ ತಾಲ್ಲೂಕಿನಲ್ಲಿರುವ ಅರಕ್ಷಿತ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಪುಷ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ .

ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಓಆರ್ 23 ಟಿಡಿಎ 2025, ದಿನಾಂಕ:29.11.2025 ಕ್ಕೆ ಪರಿವಿಡಿ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಇರುವ ಸ್ಥಳ	ಸ್ಮಾರಕ/ ಕಟ್ಟಡದ ಹೆಸರು	ಸಂರಕ್ಷಣೆಗೆ ಒಳಪಡುವ ರೆವಿನ್ಯೂ ನಿವೇಶನ ಮತ್ತು ವಿಸ್ತೀರ್ಣ	ಮೇರೆಗಳು (ಚಕ್ಕುಬಂದಿ)		ಒಡೆತನ	ಷರಾ
1	2	3	4	5	6	7		8	9
1.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಕೋಟೆ ವೀರಭದ್ರೇಶ್ವರ ದೇವಸ್ಥಾನ	ಸ್ವತ್ತಿನ ನಂ.905/ಅ ಪೂರ್ವ ಪಶ್ಚಿಮ 34.50 ಮೀಟರ್, ಉತ್ತರ ದಕ್ಷಿಣ 16.70 ಮೀಟರ್, ಒಟ್ಟು ವಿಸ್ತೀರ್ಣ 576.15 ಚದರ ಮೀಟರ್	ಪೂರ್ವಕ್ಕೆ	ಕೋಟೆ ಗೋಡೆ	ಕೋಟೆ ವೀರಭದ್ರೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ .	ಪುರಾತನ ದೇವಾಲಯವಾಗಿರುತ್ತದೆ .
						ಪಶ್ಚಿಮಕ್ಕೆ	ಸಮುದಾಯ ಭವನ ಬಯಲು		
						ಉತ್ತರಕ್ಕೆ	ಸಿದ್ಧರ ಬಾವಿಯ ಬಯಲು		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
2.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಸಿದ್ಧೇಶ್ವರ ದೇವಸ್ಥಾನ	ಸ್ವತ್ತಿನ ನಂ.861/2 ಪೂರ್ವ ಪಶ್ಚಿಮ 9.50 ಮೀಟರ್, ಉತ್ತರ ದಕ್ಷಿಣ 12.30 ಮೀಟರ್, ಒಟ್ಟು ವಿಸ್ತೀರ್ಣ 116.85 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ಶಾಲೆ	ಶ್ರೀ ಸಿದ್ಧೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ .	ಪುರಾತನ ದೇವಾಲಯವಾಗಿರುತ್ತದೆ .
						ಪಶ್ಚಿಮಕ್ಕೆ	ಸರ್ಕಾರಿ ರಸ್ತೆ		

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

						ಉತ್ತರಕ್ಕೆ	ಬಯಲು ಜಾಗ		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
3.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನ	ಸ್ವತ್ತಿನ ನಂ.1298 ಪೂರ್ವ ಪಶ್ಚಿಮ 26.00 ಮೀಟರ್, ಉತ್ತರ ದಕ್ಷಿಣ (10.50+11.50)/2 ಮೀಟರ್, ಒಟ್ಟು ವಿಸ್ತೀರ್ಣ 286 ಚದರ ಮೀಟರ್	ಪೂರ್ವಕ್ಕೆ	ಸರ್ಕಾರಿ ರಸ್ತೆ	ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಸರ್ಕಾರಿ ರಸ್ತೆ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
4.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ನೀಲಕಂಠೇಶ್ವರ ದೇವಸ್ಥಾನ	ಸ್ವತ್ತಿನ ನಂ.234 ಪೂರ್ವ ಪಶ್ಚಿಮ 21.00 ಮೀಟರ್, ಉತ್ತರ ದಕ್ಷಿಣ 15.70 ಮೀಟರ್, ಒಟ್ಟು ವಿಸ್ತೀರ್ಣ 329.70 ಚದರ ಮೀಟರ್	ಪೂರ್ವಕ್ಕೆ	ಚನ್ನಬಸವೇಶ್ವರಗೌಡರ ಆಸ್ತಿ	ಶ್ರೀ ನೀಲಕಂಠೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ರಾಮಪ್ಪ ಗುಂಗಳ ಆಸ್ತಿ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ನೂಕಾಪೂರ ಹಾಗೂ ಮಾರನಬಸರಿ ಆಸ್ತಿಗಳು		
5.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ	ಸ್ವತ್ತಿನ ನಂ.285 ಪೂರ್ವ ಪಶ್ಚಿಮ (11.60+06.20) /2 ಮೀಟರ್, ಉತ್ತರ ದಕ್ಷಿಣ (16.00+09.50)/2 ಮೀಟರ್, ಒಟ್ಟು ವಿಸ್ತೀರ್ಣ 368 ಚದರ ಮೀಟರ್	ಪೂರ್ವಕ್ಕೆ	ಸಾರ್ವಜನಿಕರ ಮನೆ	ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಸರ್ಕಾರಿ ರಸ್ತೆ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
6.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ.	ಸ್ವತ್ತಿನ ನಂ.593 ಪೂರ್ವ ಪಶ್ಚಿಮ 21.00 ಮೀಟರ್, ಉತ್ತರ ದಕ್ಷಿಣ 07.70 ಮೀಟರ್, ಒಟ್ಟು ವಿಸ್ತೀರ್ಣ 161.70 ಚದರ ಮೀಟರ್	ಪೂರ್ವಕ್ಕೆ	ಬಯಲು ಜಾಗ	ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಪಂಚಾಯತ ದಾರಿ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ಪಂಚಾಯತ ದಾರಿ		
7.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಲೆಕ್ಕದ ವೀರಭದ್ರೇಶ್ವರ ದೇವಸ್ಥಾನ	ಸ್ವತ್ತಿನ ನಂ.423 ಪೂರ್ವ ಪಶ್ಚಿಮ (00.70+11.00)/2 ಮೀಟರ್, ಉತ್ತರ ದಕ್ಷಿಣ 25.70 ಮೀಟರ್, ಒಟ್ಟು ವಿಸ್ತೀರ್ಣ 240.29 ಚದರ ಮೀಟರ್	ಪೂರ್ವಕ್ಕೆ	ಅಬ್ಬಿಗೇರಿಯವರ ಬಾವಿ	ಶ್ರೀ ಲೆಕ್ಕದ ವೀರಭದ್ರೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಸರ್ಕಾರಿ ರಸ್ತೆ		
						ಉತ್ತರಕ್ಕೆ	ಸರ್ಕಾರಿ ರಸ್ತೆ		
						ದಕ್ಷಿಣಕ್ಕೆ	ಸರ್ಕಾರಿ ರಸ್ತೆ		
8.	ಗದಗ	ಲಕ್ಕುಂಡಿ	ಲಕ್ಕುಂಡಿ	ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ.	ಸ್ವತ್ತಿನ ನಂ.904 ಪೂರ್ವ ಪಶ್ಚಿಮ 15.00 ಮೀಟರ್, ಉತ್ತರ ದಕ್ಷಿಣ 20.10 ಮೀಟರ್, ಒಟ್ಟು ವಿಸ್ತೀರ್ಣ 301.50 ಚದರ ಮೀಟರ್	ಪೂರ್ವಕ್ಕೆ	ಕೋಟೆ ಗೋಡೆ	ಶ್ರೀ ಚಂದ್ರ ಮೌಳೇಶ್ವರ ದೇವಸ್ಥಾನದ ಹೆಸರಿನಲ್ಲಿರುತ್ತದೆ.	ಪುರಾತನ ದೇವಾಲಯವಾಗಿರುತ್ತದೆ.
						ಪಶ್ಚಿಮಕ್ಕೆ	ಸಿದ್ದರ ಬಾವಿ		
						ಉತ್ತರಕ್ಕೆ	ಕಾಳಿಕಾದೇವಿ ದೇವಸ್ಥಾನ		
						ದಕ್ಷಿಣಕ್ಕೆ	ಬಯಲು ಜಾಗ		

(ಎನ್. ಪುಷ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಪುವಾಸೋದ್ಯಮ ಇಲಾಖೆ .

PR-02

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH